**1 ನೇ ಅಪರ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ಸಂಖ್ಯೆ: 976/2026**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

– ವಿರುದ್ಧ –

ಆರೋಪಿ/ಗಳು : ತ್ರಿಶೂಲ್ ಪಿ.ಎಲ್.
ತಂದೆ – ಲೋಕಪ್ರಸಾದ್,
ವಯಸ್ಸು – 21 ವರ್ಷ,
ವಾಸಃ ರಾಜಸೀಟ್ ಹತ್ತಿರ, ಇಂದಿರಾನಗರ,
ತಲತಾಮನೆ ಪೋಸ್ಟ್, ಮಡಿಕೇರಿ ತಾಲ್ಲೂಕು.

## ಆಪಾದನೆ

ಶ್ರೀಮತಿ **ನಮ್ರತಾ ಎಸ್. ಹೊಸಮಠ, ಬಿ.ಎ., ಎಲ್.ಎಲ್.ಬಿ.,** 1 ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ

1. ಚಾಸಾ.2 ರವರು ಚಾಲಕರಾಗಿ ಚಾಸಾ.10 ರವರ ಬಾಬ್ತು ಕೆಎ–09–ಜೆಜೆಡ್–6920 ನಂಬರಿನ ಮೋಟಾರು ಬೈಕಿನ ಹಿಂದಿನ ಸೀಟಿನಲ್ಲಿ ಚಾಸಾ.3 ರವರನ್ನು ಕೂರಿಸಿಕೊಂಡು ಹುಣಸೂರು ಮೈಸೂರು ಮುಖ್ಯ ರಸ್ತೆಯಲ್ಲಿ ಮನುಗನಹಳ್ಳಿ ಕಡೆಯಿಂದ ಬಂದು ಅಂಕನಹಳ್ಳಿ ಗ್ರಾಮದ ರಸ್ತೆಯ ಕಡೆಗೆ ಬೈಕನ್ನು ತಿರುಗಿಸುತ್ತಿರುವಾಗ ಮೈಸೂರು ಕಡೆಯಿಂದ ಹುಣಸೂರು ಕಡೆಗೆ ಬರುತ್ತಿದ್ದ ಆರೋಪಿಯಾದ ನೀವು ಚಾಸಾ.12 ರವರ ಬಾಬ್ತು ಕೆಎ–12–ಎಂಸಿ–3543 ನಂಬರಿನ ಕಾರನ್ನು ರಸ್ತೆಯಲ್ಲಿ ಅಪರಾಧ ಮಾಡುವ ಉದ್ದೇಶದಿಂದ, ಅತೀವೇಗ ಮತ್ತು ಅಜಾಗರೂಕೆಯಿಂದ ಮಾನವನ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಚಾಸಾ.2 ರವರ ಮೋಟಾರ್ ಬೈಕಿಗೆ ಡಿಕ್ಕಿ ಹೊಡೆದು

ಅಪಘಾತವನ್ನುಂಟು ಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ **281** ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ, ಸದರಿ ಅಪಘಾತ ಪಡಿಸಿದ ಪರಿಣಾಮ, ಚಾಸಾ.2 ರವರು ಕೆಳಕ್ಕೆ ಬಿದ್ದು ಅವರ ಎಡಕಾಲಿಗೆ ತೀವ್ರ ಸ್ವರುಪದ ಗಾಯವನ್ನುಂಟು ಮಾಡಿದ್ದು, ಚಾಸಾ.3 ರವರಿಗೆ ಸಣ್ಣಪುಟ್ಟ ತರಚಿದ ಗಾಯವನ್ನುಂಟು ಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ **125(ಬಿ)** ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

**<u>ಭಾರತೀಯ ನ್ಯಾಯ ಸಂಹಿತೆ ಕಲಂ 276 ರ ಅಡಿಯಲ್ಲಿ ಆರೋಪಿಯರ ಹೇಳಿಕೆ</u>**

ಪ್ರಶ್ನೆ- 1) ನಿಮಗೆ ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ?
ಉಃ

ಪ್ರಶ್ನೆ- 2) ತಪ್ಪೊಪ್ಪಿಕೊಳ್ಳುವಿರೋ, ವಿಚಾರಣೆಯಾಗಬೇಕೊ?
ಉಃ

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ನಮ್ರತಾ ಎಸ್. ಹೊಸಮಠ)**

ದಿನಾಂಕಃ **19.06.2026**

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಹುಣಸೂರು.